UNIVERSITY LIBRARY

Agri Newspaper Clippings

Wednesday 07-01-2026

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕಲ್ಪವೃಕ್ಷ ನಂಬಿದ ಬೆಳೆಗಾರನ ಬದುಕು ಬರಡು: 34,230 ಹೆ. ಪೈಕಿ 24,488 ಹೆಕ್ಟೇರ್‌ನಲ್ಲಿ ರೋಗ

ರೋಗಬಾಧೆಗೆ ಒಣಗಿದ ತೆಂಗಿನಮರಗಳು

ಆನಂದ್ ಬಿಲ್ಲಮನೆ ಗುಬ್ಬಿ



ಗುಬ್ಬಿ ತಾಲೂಕಿನಲ್ಲಿ ಒಟ್ಟು ತೆಂಗು ಬೆಳೆಯುವ ಪ್ರದೇಶ

34230 ಹೆಕ್ಟೇರ್,
ರುಗೋಸ್ ಬಿಳಿನೊಣ ಪೀಡಿತ ಪ್ರದೇಶ

22150 ಹೆಕ್ಟೇರ್
ಕಪ್ಪು ತಲೆ ಹುಳು ಪೀಡಿತ ಪ್ರದೇಶ

1200 ಹೆಕ್ಟೇರ್
ಕಾಂಡ ಸೋರುವ ರೋಗ ಪೀಡಿತ ಪ್ರದೇಶ

350 ಹೆಕ್ಟೇರ್
ಅಣಬೆ ರೋಗ ಪೀಡಿತ ಪ್ರದೇಶ

560 ಹೆಕ್ಟೇರ್
ಕೆಂಪು ಮೂತಿ ಹುಳು ಪ್ರದೇಶ

228 ಹೆಕ್ಟೇರ್

ತೀವ್ರರೋಗ ಬಾಧೆ

ಕಳೆದ ಹಲವು ವರ್ಷದಿಂದ ರೋಗದ ತೀವ್ರತೆಗೆ ತೆಂಗಿನ ಮರಗಳು ಹಾಳಾಗಿವೆ. ಸಾವಿರಾರು ತೆಂಗಿನ ಕಾಯಿ ನೀಡುತ್ತಿದ್ದ ಮರಗಳು ಅವಸಾನದ ಅಂಚಿಗೆ ಬಂದಿವೆ. ಹತ್ತಾರು ಜನರಿಗೆ ಕೆಲಸ ನೀಡುತ್ತಿದ್ದ ನಾವೇ ಇಂದು ನಗರಗಳಲ್ಲಿ ಕೂಲಿ ಕೆಲಸ ಮಾಡಿ ಬದುಕುವ ಸ್ಥಿತಿಗೆ ಬಂದಿದ್ದೇವೆಂದು ಹನುಮಂತನಗರದ ರೈತ ಚಂದ್ರಪ್ಪ ರೈತ ಹನುಮಂತ ನಗರ ಆತಂಕಪಟ್ಟರು.

ಅಧಿಕಾರಿಗಳಿಂದ ಸಲಹೆ ಪಡೆಯಿರಿ

ತೋಟಗಾರಿಕೆ ಇಲಾಖೆಯಿಂದ ರೈತರಿಗೆ ಮಾಹಿತಿ ನೀಡುವಲ್ಲಿ ಸಿರತಕಾಗಿದ್ದೇವೆ. ರೈತರು ಇಲಾಖೆಯ ಜತೆ ಕೈಜೋಡಿಸಿದಾಗ ಮಾತ್ರ ರೋಗ ನಿಯಂತ್ರಣ ಸಾಧ್ಯ. ಅಧಿಕಾರಿಗಳನ್ನು ಸಂಪರ್ಕಿಸಿ ಆಗತ್ಯ ಮಾಹಿತಿ ಪಡೆಯಬೇಕೆಂದು ಹಿರಿಯ ಸಹಾಯಕ ತೋಟಗಾರಿಕೆ ನಿರೀಕ್ಷಕರಾದ ಎ.ಎಸ್. ಪುಷ್ಪಲತಾ ಹೇಳಿದರು.

ಪೋಷಕಾಂಶದ ಬಗ್ಗೆ ಮಾಹಿತಿ

ಸಮಗ್ರ ಪೋಷಕಾಂಶ ನರ್ವಹಣೆಗಳ ಬಗ್ಗೆ ತಿಳಿಸಲಾಗಿದೆ. ಮುಂದೆಯೂ ಸರ್ಕಾರ ಇಲಾಖೆಯಿಂದ ಸಿಗುವ ಎಲ್ಲಾ ಸವಲತ್ತನ್ನು ನೀಡಲಾಗುವುದೆಂದು ಕಬಾ ಹೋಬಳಿ ತೋಟಗಾರಿಕೆ ಅಧಿಕಾರಿ ಜಗದೀಶ್ ಪಾಟೀಲ್‌ತಿಳಿಸಿದರು.

• ಗುಬ್ಬಿ: ತಾಲೂಕು ಎಂದಾಕ್ಷಣ ಮೊದಲು ಕಣ್ಣಿಗೆ ದುರು ಬರುವುದೇ ತೆಂಗು. ಆದರೆ ಇಂದು ಗುಬ್ಬಿಯಲ್ಲಿ ಉಳಿದಿರುವುದು ತೆಂಗು ಅಲ್ಲ, ರೋಗಪೀಡಿತ ಮರ ಗಳು ಮತ್ತು ಬೆಳೆಗಾರನ ಕಣ್ಣೀರು.

ತೋಟಗಾರಿಕೆ ಇಲಾಖೆಯ ಅಧಿಕೃತ ಅಂಕಿ-ಅಂಶಗಳೇ ಈ ದುರಂತದ ಗಂಭೀರತೆಯನ್ನು ಬಯಲಿಗೆಳೆಯುತ್ತವೆ. ತಾಲೂಕಿನಲ್ಲಿ 34,230 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿತ್ತು. ಆದರಲ್ಲಿ 24,488 ಹೆಕ್ಟೇರ್ ಪ್ರದೇಶ ರೋಗಪೀಡಿತ ವಾಗಿದೆ. ಮೂರನೇ ಎರಡರಷ್ಟು ಭಾಗ ತೆಂಗು ತೋಟ ರೋಗ ಗ್ರಸ್ತವಾಗಿದೆ. ಇದು ಪ್ರಕೃತಿ ವಿಕೋಪ ವಲ್ಲ; ಇದು ನೀತಿಹೀನತೆಯಿಂದ ಹುಟ್ಟಿದ ಮಾನವ ಸೃಷ್ಟಿ ಯ ದುರಂತ.

ಕಪ್ಪು ತಲೆ ಹುಳು, ರುಗೋಸ್ ಬಿಳಿನೊಣ, ಕಾಂಡ ಸೋರುವ ರೋಗ, ಅಣಬೆ ರೋಗ, ಕೆಂಪು ಮೂತಿ ಹುಳು ಹೀಗೆ ಹಲವು ರೋಗಗಳ ಪಟ್ಟಿಯೇ ಇದೆ. ಆದರೆ, ಇದಕ್ಕಿಂತ ದೊಡ್ಡದು ಸರ್ಕಾರದ ಅಸಡ್ಡೆ. ವರ್ಷದಿಂದ ಈ ರೋಗಗಳ ಬಗ್ಗೆ ಎಚ್ಚರಿಕೆ ನೀಡಲಾ ಗುತ್ತಿದರೂ,ರೈತರ ಹಂತದಲ್ಲಿ ಮಾಹಿತಿ ಕೊರತೆ, ಸಮರ್ಪಕ ಏಯಂತ್ರಣ, ವೈಜ್ಞಾನಿಕ ಮಾರ್ಗದರ್ಶನ ಯಾವುದೂ ನೆಲಮಟ್ಟಕ್ಕೆ ತಲುಪಲ್ಲ.

ಗುಬ್ಬಿ ನಗರದ ಪಕ್ಕದಲ್ಲೇ ಪೂರ್ಣ ಪಂಚಾಯಿತಿ ವಾರ್ಡ್ ನಂ.17ರ ಹನುಮಂತನಗರ ಪ್ರದೇಶದಲ್ಲಿ ನೂರಾರು ಎಕರೆ ತೆಂಗಿನ ತೋಟ ರೋಗದ ತೀವ್ರತೆಗೆ ನಲುಗಿ ಹೋಗಿವೆ. ಕಲ್ಲೂರು, ಬಿಟ್ಟಗೊಂಡನಹಳ್ಳಿ, ಬೆಲವತ್ತ, ನಿಟ್ಟೂರು, ಚೇಳೂರು ಸೇರಿದಂತೆ ಬಹುತೇಕ ಹೋಬಳಿಯಲ್ಲಿ ಸಾವಿರಾರು ಹೆಕ್ಟೇರ್ ತೆಂಗಿನ ತೋಟಗಳು ಸಂಪೂರ್ಣವಾಗಿ ಸೊರಗಿವೆ. ಸಾವಿರಾರು ಕಾಯಿಯನ್ನು ನೀಡುತ್ತಿದ್ದ ಮರಗಳು ಇಂದು ಬೋಳಾಗಿ ನಿಂತಿವೆ. ಮರಗಳಿಗೆ ಮಾತ್ರವಲ್ಲ, ರೈತರ ಕನಸುಗಳಿಗೂ ರೋಗ ಹಿಡಿದಿದೆ.

ಒಂದು ಕಾಲದಲ್ಲಿ ಹಳ್ಳಿಗಳ ಮನೆ ಮುಂದೆ ಕಾಣಿಸಿಗುತ್ತಿದ್ದ ತೆಂಗಿನ ಕಾಯಿಗಳ ರಾಶಿಗಳು ಇಂದು ನೆನಪು ಮಾತ್ರ. ಕೊಬ್ಬರಿಯ ಕೆಡ್‌ಗಳು ಬಣಗುಡುತ್ತಿವೆ. ತೆಂಗು ಆವರಿಂದಕ ಕುಟುಂಬಗಳು ಸಾಲದ ಬಲೆಗೆ ಸಿಲುಕುತ್ತಿವೆ. ಆದರೆ, ಸರ್ಕಾರ ಮಾತ್ರ ಆಂಕಿಅಂಶ ಭಾಷಣದಲ್ಲಿ ಕೃಪ್ತಪಟ್ಟುಕೊಂಡಿದೆ.

ಇತ್ತೀಚೆಗೆ ಸ್ಥಳಕ್ಕೆ ಭೇಟಿ ನೀಡಿದ ತೋಟಗಾರಿಕೆ ಅಧಿಕಾರಿಗಳು ಪರೋಪಕಾರಿ ಜೀವಿಗಳ ಬಿಡುಗಡೆ, ರೋಗ ನಿಯಂತ್ರಣ ಕ್ರಮಗಳ ಭರವಸೆ ನೀಡಿದ್ದಾರೆ. ಆದರೆ, ಪ್ರಶ್ನೆ ಇದು. ಇಷ್ಟು ತಡವಾಗಿ ಏಕೆ. ರೋಗ ಇಡೀ ತಾಲೂಕನ್ನೇ ಆವರಿಸಿದ ನಂತರ ಕೈಚೆಲ್ಲಿ ಮಾಡಿದರೆ ಅದನ್ನು ಪರಿಹಾರ ಎನ್ನಲೇಕೋ, ಪ್ರಾಯಶ್ಚಿತ್ತ ಎನ್ನಲೇಕೋ ಅರಿಯದಾಗಿದೆ.

ಬಟ್ಟ ಭಾಗ್ಯಗಳ ರಾಜಕಾರಣದಲ್ಲಿ ಮುಳುಗಿರುವ ಸರ್ಕಾರಕ್ಕೆ ಅನ್ನದಾತನ ನಾಶ ಕಾಣುತ್ತಿಲ್ಲ, ಆಹಾರ ಭದ್ರತೆ ಬಗ್ಗೆ ಮಾತನಾಡುವವರು ತೆಂಗು ಬೆಳೆ ನಾಶವಾದರೆ ಆದರ ಪರಿಣಾಮ ಎಷ್ಟು ಭೀಕರ ಎಂಬು ದನ್ನು ಅರ್ಥಮಾಡಿಕೊಳ್ಳುವುದಿಲ್ಲವೇ. ಇನ್ನಾ ದರೂ ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ದಿನದಲ್ಲಿ ಗುಬ್ಬಿ ತಾಲೂಕು ತೆಂಗಿನ ನೆಲೆಯಾಗಿ ಅಲ್ಲ, ಕೃಷಿ ನಿರ್ಲಕ್ಷ್ಯದ ಜೀವಂತ ಸ್ಮಾರಕವಾಗಿ ಗುರುತಿಸಲ್ಪಡು ವುದು ಖಚಿತ. ಸರ್ಕಾರದ ಘೋಷಣೆಯದ ಹೊರಬಂದು, ತುರ್ತು ಪರಿಹಾರ, ನಷ್ಟ ಪೂರ್ತಿ, ವೈಜ್ಞಾನಿಕ ಚಿಕಿತ್ಸಾ ಯೋಜನೆಯನ್ನು ಜಾರಿಗೆ ತರಬೇಕಾಗಿದೆ.

Hosa Digantha Pg.08

Sugar output up 25% in first 2 months at 119 L tonnes

MAHESH KULKARNI
BENGALURU, DHNS



India's sugar mills have recorded a robust 25% growth in sugar production so far this season, at 119 lakh tonnes as of December 31, 2025. The mills across the country commenced crushing sugarcane for the current season (October 2025 to September 2026) from November onwards. During the same period, last year, the sugar production was 95 lakh tonnes.

Good weather conditions and availability of ample water across the growing states has resulted in higher sugarcane production this year. The mills have reported improvement in yield and increase in the recovery of sugar, said Deepak Ballani, Director General of Indian Sugar Mills Association (ISMA).

"There has been a substantial increase in sugar production this year and states like Maharashtra are showing a phenomenal increase this year. Till date, Maharashtra has produced around 49 lakh tonnes, compared to 30 lakh tonnes last year, a phenomenal growth of 62% over the same period last year. And there is an improvement in UP and Karnataka also," Ballani told *DH*.

Uttar Pradesh and Karnataka have produced 36 lakh tonnes and 23 lakh tonnes of sugar, respectively, in the first two months of the current season. The area under sugarcane has increased marginally to 57.35 lakh hectares, as against 57.11 lakh hectares in the previous year.

The season is progressing well and the industry had anticipated a total sugar production of around 343.5 lakh tonnes in this season. After taking 34 lakh tonnes for ethanol diversion, approximately 309 lakh tonnes of production is projected in 2025-26 season, a growth of 4.5% over the same period last year. The production stood at 295 lakh tonnes during this period last year, he said.

During the 2024-25 sugar season, the country's sugar production stood at 261.24 lakh tonnes. This year, 504 sugar mills have commenced cane crushing as against 492 mills in the same period last year.

The Hindu Pg.12



ಬೆಳೆ ವೈವಿಧ್ಯತೆ ಮಣ್ಣು ಫಲವತ್ತತೆಗೆ ರಹದಾರಿ

ಯ ಶಸ್ವಿ ಕೃಷಿಗೆ ಫಲವತ್ತಾದ ಮಣ್ಣು ಬಹಳ ಅವಶ್ಯವಾಗಿದೆ. ಆರೋಗ್ಯಕರ ಮಣ್ಣಿನಿಂದ ಮಾತ್ರ ಆರೋಗ್ಯಕರ ಫಸಲು ಪಡೆಯಲು ಸಾಧ್ಯವಾಗುತ್ತದೆ. ನಿರೀಕ್ಷಿತ ಇಳುವರಿ ಮತ್ತು ಸಸ್ಯಗಳ ಆರೋಗ್ಯಕರ ಬೆಳವಣಿಗೆಗೆ ಅಗತ್ಯವಾದ ಪೋಷಕಾಂಶಗಳನ್ನು ಸಮಯಾನುಸಾರ ಪೂರೈಸಲು ಫಲವತ್ತಾದ ಮಣ್ಣು ಮೂಲವಾಗಿದೆ.

ಸಾವಯವ ಪದಾರ್ಥ: ಕಾಂಪೋಸ್ಟ್ ಜೈವಿಕ ಹಾಗೂ ಸಾವಯವ ಗೊಬ್ಬರಗಳನ್ನು ಮತ್ತು ಬೆಳೆಯುಳಕೆಗಳನ್ನು ನಿಯಮಿತವಾಗಿ ಮಣ್ಣಿನಲ್ಲಿ ಸೇರಿಸುತ್ತಿರಬೇಕು. ಇದರಿಂದ ಸಸ್ಯಗಳಿಗೆ ಪ್ರತಿ ಹಂತದಲ್ಲಿ ಅಗತ್ಯವಾದ ಪೋಷಕಾಂಶ ಸಿಗುತ್ತದೆ. ಮಣ್ಣಿನಲ್ಲಿ ಸಾವಯವ ಇಂಗಾಲವು ಹೆಚ್ಚಾಗುವುದರಿಂದ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವು ಹೆಚ್ಚಾಗುತ್ತದೆ. ನೀರಿನ ಬಳಕೆಯು ಕಡಿಮೆಯಾಗುತ್ತದೆ.

ಮಿಶ್ರ ಬೇಸಾಯ: ದೀರ್ಘಾವಧಿಯ ಬೆಳೆಗಳೊಂದಿಗೆ ಅಲ್ಪಾವಧಿ ಬೆಳೆಗಳನ್ನು ಬೆಳೆಯುವುದರಿಂದ ಮಣ್ಣಿನ ಫಲವತ್ತತೆಯು ಹೆಚ್ಚಾಗುವುದಲ್ಲದೆ ಇಳುವರಿಯಲ್ಲಿ ಗಮನಾರ್ಹ ಬದಲಾವಣೆಯಾಗುತ್ತದೆ. ಏಕದಳ ಬೆಳೆಗಳೊಂದಿಗೆ ಏಕದಳ ಬೆಳೆಗಳನ್ನು ನಾಟಿ ಮಾಡಬಾರದು. ಮಿಶ್ರಬೆಳೆಗಳ ಆಯ್ಕೆ ಬಹುಮುಖ್ಯವಾಗಿದೆ.

ಕಾಲ್ಪ್ಪ ಪದ್ಧತಿ: ಪ್ರತಿ ಋತುವಿನಲ್ಲಿ ನಿರ್ದಿಷ್ಟ ಪ್ರದೇಶಗಳಲ್ಲಿ ಒಂದೇ ಬೆಳೆಯನ್ನು ಮರಳಿ ಬೆಳೆಯುವುದರಿಂದ ಮಣ್ಣಿನ ಫಲವತ್ತತೆಯು ಕಡಿಮೆಯಾಗುತ್ತದೆ.ಬೆಳೆಗಳ ಬದಲಾವಣೆಗಳಿಂದ ಮಣ್ಣು ಮತ್ತು ಬೆಳೆಗೆ ಅವಶ್ಯವಿರುವ ವಿಭಿನ್ನ ಪೋಷಕಾಂಶಗಳು ನೈಸರ್ಗಿಕವಾಗಿ ಪೂರೈಕೆಯಾಗುತ್ತವೆ. ಇದರಿಂದ ಮಣ್ಣಿನ ಸಮತೋಲನ, ಫಲವತ್ತತೆ ಮತ್ತು ನಿರೀಕ್ಷಿತ ಇಳುವರಿಯು ಸಾಧ್ಯವಾಗುತ್ತದೆ.

ಕವರ್ ಬೆಳೆ: ಬೆಳೆಗಳಲ್ಲದ ಸಮಯದಲ್ಲಿ (ಆಫ್-ಸೀಜನ್) ಕ್ಲೋವರ್, ಜೀನ್ಸ್ ಮತ್ತು ಹುಲ್ಲುಗಳಂತಹ ಬೆಳೆಗಳನ್ನು ಬೆಳೆಯಬೇಕು. ಈ ಬೆಳೆಗಳು ಮಣ್ಣಿನ ಸವಕಳಿಯನ್ನು ತಪ್ಪಿಸುತ್ತವೆಯಲ್ಲದೆ ಬೆಳೆಗೆ ಮತ್ತು ಮಣ್ಣಿಗೆ ಅವಶ್ಯವಿರುವ ಪೋಷಕಾಂಶಗಳನ್ನು ನಿಯಮಿತವಾಗಿ ಪೂರೈಸುವುದರಿಂದ ಮಣ್ಣಿನ ರಚನೆಯು ಸುಧಾರಿಸುತ್ತದೆ.

ಅತಿಯಾಗಿ ಉಳುಮೆ: ಅತಿಯಾಗಿ ಉಳುಮೆ ಮಾಡುವುದರಿಂದ ಮಣ್ಣಿನ ರಚನೆಯು ಒಡೆಯುತ್ತದೆಯಲ್ಲದೆ ಫಲವತ್ತತೆಯನ್ನು ಕಡಿಮೆ ಮಾಡುತ್ತದೆ. ಮಣ್ಣನ್ನು ಆರೋಗ್ಯಕರವಾಗಿಡಲು ಉಳುಮೆಯನ್ನು ಕಡಿಮೆ ಮಾಡಬೇಕು.

ಬೆಳೆಯುಳಕೆಗಳ ಆಚ್ಛಾದನೆ: ಒಣಹುಲ್ಲು, ಎಲೆಗಳು ಹಾಗೂ ಹಸಿರೆಲೆ ಸಸ್ಯಗಳನ್ನು ಪ್ರತಿ ಬೆಳೆಯ ಸಾಲುಗಳಲ್ಲಿ ಮಲ್ಚಿಂಗ್ ಮಾಡುವುದರಿಂದ ಮಣ್ಣಿನ ತೇವಾಂಶವನ್ನು ಕಾಪಾಡಬಹುದಾಗಿದೆ. ಆಚ್ಛಾದನೆಯು ಕಳೆಗಳನ್ನು ನಿಗ್ರಹಿಸುವುದಲ್ಲದೆ ದಿನಕಳೆಯುತ್ತ ಕೊಳೆಯುತ್ತ ಮಣ್ಣಿನಲ್ಲಿ ಸಾವಯವ ಪದಾರ್ಥಗಳನ್ನು ಸೇರಿಸುತ್ತದೆ.

ನಿಯಮಿತವಾಗಿ ಮಣ್ಣು ಪರೀಕ್ಷೆ: ಮಣ್ಣಿನಲ್ಲಿರುವ ಅವೇಕ್ಷಿತ ಪ್ರಮಾಣದ ಪಿಹೆಚ್ ಮತ್ತು ಇತರೆ ಸೇರಿದಂತೆ ಅವಶ್ಯಕ ಪ್ರಧಾನ ಹಾಗೂ ಸೂಕ್ಷ್ಮ ಪೌಷ್ಟಿಕಾಂಶಗಳ ಮಟ್ಟಗಳನ್ನು ಬೆಳೆಯ ಪೂರ್ವದಲ್ಲಿ ಪರೀಕ್ಷಿಸಿ ತಜ್ಞರ ಶಿಫಾರಸಿನಂತೆ ರಾಸಾಯನಿಕಗಳನ್ನು ಉಪಯೋಗಿಸಬೇಕು. ಪ್ರಸ್ತುತ ಈ ಕ್ರಮವನ್ನು 99% ರೈತರು ಪಾಲಿಸುತ್ತಿಲ್ಲ. ಪ್ರತಿ ಕೆಲವು ವರ್ಷಗಳಿಗೊಮ್ಮೆಯಾದರು ಮಣ್ಣನ್ನು ಪರೀಕ್ಷಿಸಬೇಕು.

ಹಸಿರು ಗೊಬ್ಬರ: ಸಣಬು, ಡೆಂಚಾ, ದ್ವಿದಳ ಧಾನ್ಯಗಳು ಮತ್ತು ಹುಲ್ಲುಗಳಂತಹ ಹಸಿರು ಗೊಬ್ಬರದ ಬೆಳೆಗಳನ್ನು ಮುಖ್ಯ ಬೆಳೆಯ ಪೂರ್ವದಲ್ಲಿ ಬೆಳೆಯಬೇಕು. ಈ ಬೆಳೆಗಳನ್ನು ಮತ್ತೆ ಮಣ್ಣಿನಲ್ಲಿ ಸೇರಿಸುವುದರಿಂದ ಸಾವಯವ ಇಂಗಾಲ, ಸಾವಯವ ಪದಾರ್ಥ ಮತ್ತು ಪೋಷಕಾಂಶಗಳು ಹೆಚ್ಚಳವಾಗುವುದರಿಂದ ಮಣ್ಣಿನ ಆರೋಗ್ಯವು ಸುಧಾರಿಸುತ್ತದೆ.

ನೀರಾವರಿ ನಿರ್ವಹಣೆ: ಸರಿಯಾದ ನೀರಾವರಿ ಕ್ರಮಗಳಿಂದ ಮಣ್ಣಿನ ಸವಕಳಿಯನ್ನು ತಡೆಗಟ್ಟಬಹುದು. ಮಣ್ಣಿನ ಫಲವತ್ತತೆ ಹಾಳಾಗಲು ರಾಸಾಯನಿಕಗಳಿಗಿಂತ ಅತಿಯಾದ ನೀರು ಕಾರಣವಾಗಿದೆ. ಅತಿಹೆಚ್ಚು ನೀರಿನಿಂದ ಮಣ್ಣಿನಲ್ಲಿರುವ ಪೋಷಕಾಂಶಗಳು ನಾಶವಾಗುತ್ತವೆ ಮತ್ತು ಸೂಕ್ಷ್ಮಾಣುಜೀವಿಗಳು ಸಾಯುತ್ತವೆ ಅಥವಾ ನಿಷ್ಕ್ರಿಯೆವಾಗುತ್ತವೆ. ಆದ್ದರಿಂದ ಬೆಳೆಯು ಸ್ವಲ್ಪ ಬಾಡುವವರೆಗೆ ನೀರು ಕೊಡಬಾರದು ಹಾಗೂ ಬೆಳೆ ಒಣಗುವವರೆಗೆ ನೀರು ಕೊಡಲು ಕಾಯಬಾರದು.

ಮಣ್ಣಿನ ಜೀವವೈವಿಧ್ಯತೆ: ಮಣ್ಣಿನ ಫಲವತ್ತತೆಯು ಹೆಚ್ಚಾಗಲು ಎರೆಹುಳುಗಳು, ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳಂತಹ ಪ್ರಯೋಜನಕಾರಿ ಮಣ್ಣಿನ ಜೀವಿಗಳನ್ನು ಉತ್ತೇಜಿಸುವುದು ಅವಶ್ಯವಾಗಿದೆ. ಇವು ಸಾವಯವ ಪದಾರ್ಥಗಳನ್ನು ಒಡೆಯುವಲ್ಲಿ ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

*ಬಸವರಾಜ ಶಿವಪ್ಪ ನಿರಗಾಂಜಿ
ಕೃಷಿ ತಜ್ಞರು ಹಾಗೂ ಸಹಾಯಕ ಮತ್ತು ಪ್ರಾಂಧಕರು-ಕೃಷಿ ವಿಜ್ಞಾನ ಜಮಖಂಡಿ ಬಾಗಲಕೋಟೆ

Samyuktha Kar. Pg.10



Times of India Pg.09

ಮಕ್ಕಳಲ್ಲಿ ಪೌಷ್ಟಿಕತೆ ಮಟ್ಟ ಹೆಚ್ಚಿಸಿದ ನುಗ್ಗೆ ಪೌಡರ್!

ರಾಯಚೂರಲ್ಲಿ ಕೈಗೊಂಡಿದ್ದ ಪ್ರಾಯೋಗಿಕ ಕಾರ್ಯಕ್ರಮ। ಉತ್ತಮ ಫಲಿತಾಂಶ ನೀಡಿದ್ದರೂ ಮುಂದುವರಿಸುವಲ್ಲಿ ನಿರಾಸಕ್ತಿ

■ ಸಿದ್ಧಯ್ಯಸ್ವಾಮಿ ಕುಕನೂರು

ಉದಯವಾಣಿ ಸಮಾಚಾರ

ರಾಯಚೂರು: ಆಪೌಷ್ಟಿಕತೆ ಸಮಸ್ಯೆಯಿಂದ ಬಳಲುತ್ತಿದ್ದ ಮಕ್ಕಳ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕೈಗೊಂಡಿದ್ದ ನುಗ್ಗೆ (ಮೊರಿಂಗಾ) ಪೌಡರ್ ವಿತರಿಸುವ ಪ್ರಾಯೋಗಿಕ ಕಾರ್ಯಕ್ರಮ ಉತ್ತಮ ಫಲಿತಾಂಶ ನೀಡಿದೆ. ಆದರೆ, ಅದನ್ನು ಮುಂದುವರಿಸುವಲ್ಲಿ ನಿರಾಸಕ್ತಿ ಕಂಡು ಬರುತ್ತಿದೆ.

ರಾಯಚೂರು ಜಿಲ್ಲೆ ಮಹಿಳೆ ಮತ್ತು ಮಕ್ಕಳ ಆಪೌಷ್ಟಿಕತೆಯಿಂದಲೇ ಸುದ್ದಿ ಮಾಡಿದ ಅನೇಕ ನಿದರ್ಶನಗಳಿವೆ. ಸರ್ಕಾರ ಕೂಡ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅನೇಕ ರೀತಿಯ ಆಹಾರಗಳನ್ನು ನೀಡುವ ಮೂಲಕ ಆಪೌಷ್ಟಿಕ ನಿವಾರಣೆಗೆ ಶ್ರಮಿಸಿದರೂ ನಿರೀಕ್ಷಿತ ಫಲ ನೀಡಿರಲಿಲ್ಲ. ಆದರೆ, ಜಿಲ್ಲಾಡಳಿತವು ಕೇಂದ್ರ ಸರ್ಕಾರ ಮತ್ತು ಖಾಸಗಿ ಸಂಸ್ಥೆಯ ಸಹಯೋಗದಲ್ಲಿ 2023ರ ನವೆಂಬರ್‌ನಿಂದ 2024ರ ಏಪ್ರಿಲ್‌ವರೆಗೆ ಮಕ್ಕಳಿಗೆ ನುಗ್ಗೆ ಪೌಡರ್ ನೀಡುವ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಜಾರಿ ಮಾಡಿತ್ತು. ಈ ಅವಧಿಯಲ್ಲಿ ಮಕ್ಕಳ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡು



ಬಂದಿದೆ. ತೀರ ಆಪೌಷ್ಟಿಕತೆಯಿಂದ ಬಳಲುತ್ತಿದ್ದ 297 ಮಕ್ಕಳಿಗೆ ಈ ಆಹಾರ ನೀಡಿದಾಗ ಅವರಲ್ಲಿ ಗುರುತರ ಬದಲಾವಣೆ ಕಂಡು ಬಂದಿದೆ.

27,317 ಸಾಧಾರಣ ಆಪೌಷ್ಟಿಕ ಮಕ್ಕಳು: ಜಿಲ್ಲೆಯಲ್ಲಿ ಒಟ್ಟು 1.94 ಲಕ್ಷ ಮಕ್ಕಳಿದ್ದು, ಆದರಲ್ಲಿ 27,317 ಸಾಧಾರಣ ಆಪೌಷ್ಟಿಕ ಮಕ್ಕಳಿದ್ದರೆ, 300 ತೀವ್ರ ಆಪೌಷ್ಟಿಕ ಮಕ್ಕಳಿದ್ದರು. ಆದರಲ್ಲಿ ಸಾಧಾರಣ ಮತ್ತು ತೀವ್ರ ಆಪೌಷ್ಟಿಕತೆ ಉಳ್ಳಂತಹ 0-5 ವರ್ಷದೊಳಗಿನ ಮಕ್ಕಳಿಗೆ ನಿತ್ಯ 5 ಗ್ರಾಂನಂತೆ ನುಗ್ಗೆ ಪೌಡರ್ ನೀಡಲಾಗುತ್ತಿತ್ತು. ಸೆಂಟ್ರಲ್ ವೇರ್‌ಹೌಸ್ ಎನ್ನುವ ಸಂಸ್ಥೆಯ ಅಂದಾಜು 3.5 ಕೋಟಿ ರೂ. ಸಿಎಸ್‌ಆರ್ ಅನುದಾನದಡಿ ಈ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿತ್ತು.

ಶೇ.9.03ರಷ್ಟು ಆಪೌಷ್ಟಿಕತೆ ನಿವಾರಣೆ: 2023ರ ನವೆಂಬರ್‌ನಲ್ಲಿ ಈ ಕಾರ್ಯಕ್ರಮ ಆರಂಭಿಸಿದಾಗ ಜಿಲ್ಲೆಯಲ್ಲಿ ಸಾಧಾರಣ ಆಪೌಷ್ಟಿಕ ಮಕ್ಕಳ ಸಂಖ್ಯೆ 25,933ರಷ್ಟಿತ್ತು. 2024ರ ಏಪ್ರಿಲ್ ವೇಳೆಗೆ ಮಕ್ಕಳ ಸಂಖ್ಯೆ 23522ಕ್ಕೆ ತಲುಪಿತ್ತು. ಶೇ.9.03ರಷ್ಟು ಆಪೌಷ್ಟಿಕತೆ ನಿವಾರಣೆಯಾಗಿತ್ತು. ಇನ್ನೂ ತೀರ ಆಪೌಷ್ಟಿಕ ಹೊಂದಿದ್ದ 296 ಮಕ್ಕಳಿಗೂ ಈ ಪೌಡರ್ ನೀಡಿದಾಗ ಆ ಮಕ್ಕಳೆಲ್ಲ ಆಪೌಷ್ಟಿಕತೆ ಸಮಸ್ಯೆಯಿಂದ ಹೊರ ಬಂದಿದ್ದರು. ಈ ಎಲ್ಲ ಅಂಶಗಳು ಜಿಲ್ಲಾಡಳಿತ ಮತ್ತು ಖಾಸಗಿ ಸಂಸ್ಥೆಯ ವರದಿಯಲ್ಲಿ ತಿಳಿಸಲಾಗಿದೆ.

ನಿರಂತರ ಪ್ರಕ್ರಿಯೆ: ಸರ್ಕಾರ ಈಗಾಗಲೇ ಮೊಟ್ಟೆ, ಬಾಳೆ ಹಣ್ಣು, ಶೇಂಗಾ ಚಿಕ್ಕಿ ಸೇರಿದಂತೆ ಸಾಕಷ್ಟು ಆಹಾರ ನೀಡುತ್ತಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಆಪೌಷ್ಟಿಕತೆ ನಿವಾರಣೆಯಾಗಿಲ್ಲ.

ಆಲ್ಲದೇ, ಇದೊಂದು ನಿರಂತರ ಪ್ರಕ್ರಿಯೆ ಆಗಿದ್ದು, ಹೊಸ ಮಕ್ಕಳಲ್ಲೂ ಆಪೌಷ್ಟಿಕತೆ ಕಂಡು ಬರುತ್ತದೆ. ಹೀಗಾಗಿ ನುಗ್ಗೆ ಪೌಡರ್‌ಮಕ್ಕಳಿಗೆ ನಿರಂತರವಾಗಿ ನೀಡುವ ಮೂಲಕ ಆಪೌಷ್ಟಿಕತೆಯನ್ನು ಶಾಶ್ವತವಾಗಿ ಗುಣಪಡಿಸಲು ಒತ್ತು ನೀಡಬಹುದು ಎನ್ನುತ್ತಾರೆ ಮಕ್ಕಳ ತಜ್ಞರು.

ಸುಧಾರಣೆ ಕಂಡ ಅಂಶಗಳು

- ಶೇ.88.5.....ತೂಕದಲ್ಲಿ ಹೆಚ್ಚಳ
- ಶೇ.62.5.....ಎತ್ತರದಲ್ಲಿ ಹೆಚ್ಚಳ
- ಶೇ.78.....ಎಚ್‌ಬಿಎ ಹೆಚ್ಚಳ
- ಶೇ.80.....ಚಟುವಟಿಕೆಗಳು
- ಶೇ.92.....ಆಹಾರ ಸೇವನೆ
- ಶೇ.90.4.....ಆರೋಗ್ಯದಲ್ಲಿ ಹೆಚ್ಚಳ

ನುಗ್ಗೆ ಸೊಪ್ಪಿನಲ್ಲಿರುವ ಹೇರಳವಾದ ಪೌಷ್ಟಿಕಾಂಶಗಳು ಮಕ್ಕಳ ಆರೋಗ್ಯ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿರುವುದು ವರದಿಯಿಂದ ಗೊತ್ತಾಗಿದೆ. ಇದನ್ನು ಮುಂದುವರಿಸುವ ಕುರಿತು ಜಿಲ್ಲೆಗೆ ತಂಡವೊಂದು ಆಗಮಿಸಿ ಡೀಸಿ, ಜಿಪಂ ಸಿಇಒ ನೇತೃತ್ವದಲ್ಲಿ ಚರ್ಚೆ ನಡೆಸಿದೆ. ಸರ್ಕಾರದ ಮಟ್ಟದಲ್ಲೂ ಈ ಬಗ್ಗೆ ಚರ್ಚೆಗಳು ನಡೆದಿವೆ.

● **ಚೇತನಕುಮಾರ್,** ಡಿಡಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ

Udaya Vani Pg.06